# ಮನ್ಮಥನಾಥ ಘೋಷ್ ಕಂಡಂತೆ ಶ್ರೀರಾಮಕೃಷ್ಣರು

**ಸ್ವಾಮಿ ಚೇತನಾನಂದರು ಬರೆದಿರುವ *Ramakrishna As We Saw Him* ಎಂಬ ಗ್ರಂಥದ ಅನುವಾದದ ಒಂದು ಭಾಗವನ್ನು ಇಲ್ಲಿ ಕೊಡಲಾಗಿದೆ. ಅನುವಾದಿಸಿದವರು ಆಶ್ರಮದ ಭಕ್ತರಾದ ಶ್ರೀ ಆರ್. ಲೋಕೇಶ ಅವರು.**

ನನ್ನ ಕುಟುಂಬದ ವಾಸ ಕಲ್ಕತ್ತದ ಬಿಡಾನ್ ರಸ್ತೆಯಲ್ಲಿ. ಆ ದಿನಗಳಲ್ಲಿ ವಾದ್ಯಸಂಗೀತವನ್ನು ನುಡಿಸುವ "ಸಣ್ಣ ಸಂಗೀತ ಗೋಷ್ಠಿ"ಗಳು ವಾಡಿಕೆಯಲ್ಲಿದ್ದವು. ತಾರುಣ್ಯದ ಆ ದಿನಗಳಲ್ಲಿ ನನಗೆ ವಿದ್ಯಾಭ್ಯಾಸದಲ್ಲಿ ಅಂತಹ ಒಲವು ಇರಲಿಲ್ಲ, ಬದಲಿಗೆ ಸಂಗೀತದಲ್ಲಿ ತಕ್ಕಮಟ್ಟಿಗೆ ಸಾಮರ್ಥ್ಯವನ್ನು ಪಡೆದುಕೊಂಡಿದ್ದೆ. ಹೀಗಾಗಿ ನಮ್ಮ ಮನೆಯ ಹತ್ತಿರದಲ್ಲೇ ಇದ್ದ ಒಂದು ವಾದ್ಯ ಸಂಗೀತ ಗೋಷ್ಠಿಗೆ ಸೇರಿಕೊಂಡೆ. ಅದರಲ್ಲಿ ಈಗಾಗಲೇ ನನ್ನ ಹಲವಾರು ಮಿತ್ರರು ಸದಸ್ಯರಾಗಿ ಸೇರಿದ್ದರು.

ಒಂದು ದಿನ ಬೆಳಗ್ಗೆ ನಮ್ಮ ಸಂಗೀತಗೋಷ್ಠಿಯ ಸದಸ್ಯರೆಲ್ಲರೂ ಪಾನಿಹಾಟಿಗೆ ಹೋಗಲು ಒಂದು ದೋಣಿಯಲ್ಲಿ ಕುಳಿತು, ಗಂಗಾನದಿಯಲ್ಲಿ ತೇಲುತ್ತ ಹೊರಟೆವು. ದಾರಿಯುದ್ದಕ್ಕೂ ಹಾಡುತ್ತ ಸಾಗಿದೆವು. ನಾವು ರಾಣಿ ರಾಸಮಣಿಯು ಕಟ್ಟಿಸಿದ ಕಾಳೀ ದೇವಾಲಯದ ಬಳಿ ಬಂದಾಗ, ದೇವಾಲಯದ ಬಳಿ ನಿಲ್ಲಿಸಲು ದೋಣಿಯವನಿಗೆ ಹೇಳಿದೆವು. ದೋಣಿಗಳು ನಿಲ್ಲುವ ಘಾಟಿನಲ್ಲಿ ನಮ್ಮ ದೋಣಿಯು ಬಂದು ನಿಂತಾಗ, ನನ್ನ ಸ್ನೇಹಿತರಲ್ಲೊಬ್ಬ ಹೇಳಿದ: "ನನಗೆ ತುಂಬ ಹಸಿವಾಗುತ್ತಿದೆ. ಈ ದೇವಾಲಯದಲ್ಲಿ ಒಬ್ಬರು ಪರಮಹಂಸರು ವಾಸಿಸುತ್ತಿದ್ದಾರೆ ಎಂದು ಕೇಳಿದ್ದೇನೆ. ಅವರನ್ನು ನೋಡಲು ಹೋದ ಎಲ್ಲರಿಗೂ ತಿನ್ನಲು ಏನಾದರೂ ತಿನಿಸನ್ನು ಕೊಡುತ್ತಾರಂತೆ ಅವರು."

ಆನಂತರ, ನಮ್ಮಲ್ಲಿ ಯಾರು ಅವರ ಬಳಿ ಹೋಗಿ ಅವರಿಂದ ತಿನ್ನಲು ಏನಾದರೂ ಕೇಳಿ ತರುವುದೆಂಬ ವಿಚಾರದಲ್ಲಿ ಚರ್ಚೆ ಪ್ರಾರಂಭವಾಯಿತು. ಕೊನೆಗೆ ನಾನು ಹೇಳಿದೆ: "ಪರಮಹಂಸರ ಬಳಿ ಹೋಗಲು ನೀವೆಲ್ಲ ಇಷ್ಟೊಂದು ಹಿಂಜರಿಯುತ್ತಿರುವುದಾದರೂ ಏಕೆ? ನಾನು ಅವರ ಬಳಿಗೆ ಹೋಗಿ, ತಿನ್ನಲು ಏನಾದರೂ ತರುತ್ತೇನೆ." ನಾನು ದೋಣಿಯಿಂದ ಇಳಿದು, ದೇವಾಲಯದಲ್ಲಿ ಶ್ರೀರಾಮಕೃಷ್ಣರು ಎಲ್ಲಿ ಇರುತ್ತಾರೆ ಎಂದು ಪತ್ತೆ ಮಾಡಿ, ಅವರ ಕೋಣೆಯನ್ನು ತಲುಪಿದೆ.

ನನ್ನನ್ನು ನೋಡಿ ಶ್ರೀರಾಮಕೃಷ್ಣರು ಮುಗುಳ್ನಗುತ್ತ ಕೇಳಿದರು, "ನಿನಗೆ ಏನು ಬೇಕಾಗಿದೆ?" ಎಂದು.

ನಾನು ಚುಟುಕಾಗಿ ಉತ್ತರಿಸಿದೆ : "ಕಲ್ಕತ್ತೆಯಿಂದ ನಮ್ಮ ಸಂಗೀತಗೋಷ್ಠಿ ಪಾನಿಹಾಟಿಗೆ ಹೊರಟಿದೆ. ನಾವು ಮನೆಯನ್ನು ಬೆಳಗಿನ ಜಾವ, ಏನೂ ಆಹಾರ ತೆಗೆದುಕೊಳ್ಳದೆ ಬಿಟ್ಟಿದ್ದರಿಂದ, ನಮಗೆಲ್ಲ ತುಂಬ ಹಸಿವಾಗುತ್ತಿದೆ. ದಯವಿಟ್ಟು ನಮಗೆ ತಿನ್ನಲು ಏನಾದರೂ ಕೊಡಿ."

ಆಗ ಶ್ರೀರಾಮಕೃಷ್ಣರು ನನ್ನನ್ನೇ ದಿಟ್ಟಿಸಿ ನೋಡಿದರು. ನಂತರ ಕುಳಿತಲ್ಲಿಂದೆದ್ದು ಎಲೆಯಲ್ಲಿ ಕೆಲವು ಹಣ್ಣುಗಳನ್ನು ಹಾಗೂ ಸ್ವಲ್ಪ ಸಿಹಿತಿಂಡಿಗಳನ್ನು ಇಟ್ಟು ನನಗೆ ಕೊಟ್ಟರು.

"ಇಷ್ಟು ಕಡಿಮೆ ತೆಗೆದುಕೊಂಡು ಹೋಗಿ ನಾನೇನು ಮಾಡಲಿ? ಅಲ್ಲಿ ಸುಮಾರು ಒಂದು ಡಜನ್ ಜನರಿದ್ದಾರೆ ನಮ್ಮ ಗುಂಪಿನಲ್ಲಿ. ಇಷ್ಟು ಕಡಿಮೆ ತಿನಿಸು ಕೇವಲ ನನಗೊಬ್ಬನಿಗೆ ಮಾತ್ರ ಸಾಕಾಗುತ್ತದೆ. ಮಹಾಶಯರೇ, ನಿಮ್ಮ ಬಳಿಯ ಬುಟ್ಟಿಯಲ್ಲಿ ತುಂಬ ಇದೆ. ನನಗೆ ಇನ್ನೂ ಜಾಸ್ತಿ ಕೊಡಿ" ಎಂದೆ.

ಇದನ್ನು ಕೇಳಿ ಅವರು ಪುಟ್ಟ ಬಾಲಕನಂತೆ, ನಾನೆಲ್ಲಿ ಅವರಿಂದ ಹಣ್ಣುಗಳು ಹಾಗೂ ಸಿಹಿತಿಂಡಿಯನ್ನು ಬಲವಂತದಿಂದ ಕಿತ್ತುಕೊಂಡು ಹೋಗಿಬಿಡುವೆನೋ ಎಂಬಂತೆ ಬುಟ್ಟಿಯನ್ನು ತಮ್ಮ ಎರಡೂ ಕೈಗಳಿಂದ ಮುಚ್ಚಿಕೊಂಡರು. ನಂತರ ಮುನಿಸಿಕೊಂಡು ಹೇಳಿದರು: "ಹೋಗು, ಹೋಗು! ನಾನು ಕೊಟ್ಟಷ್ಟರಿಂದ ತೃಪ್ತನಾಗು. 'ಯಾರ ಬಳಿ ಇತರರಿಗೆ ಕೊಡಲು ಏನೂ ಇರುವುದಿಲ್ಲವೊ, ಅವನು ನಾಯಿಯನ್ನು ಕೂಡ ಸಾಕಬಾರದು.' ನಿನಗೆ ಹಸಿವೆಯಾಗಿದೆಯಲ್ಲ ನೀನು ತಿನ್ನು. ಅದು ಬಿಟ್ಟು ನಿಮ್ಮ ಇಡೀ ಗುಂಪಿಗೆ ತಿನ್ನಲು ಕೊಡಿರೆಂದು ಏಕೆ ಕೇಳುತ್ತೀಯೆ?"

ಆಗ ನಾನು, "ಮಹಾಶಯರೇ, ನನ್ನ ಸ್ನೇಹಿತರನ್ನು ಬಿಟ್ಟು ನಾನು ತಿನ್ನುವವನಲ್ಲ. ದಯವಿಟ್ಟು ನಿಮ್ಮ ತಿಂಡಿಯನ್ನು ನೀವು ವಾಪಸ್ಸು ತೆಗೆದುಕೊಳ್ಳಿ" ಎಂದು ಹೇಳಿ ನಾನು ಹಿಂದಿರುಗಿ ಹೊರಡುವುದರಲ್ಲಿದ್ದೆ. ಆಗ ಅವರು ನನ್ನನ್ನು ಬಹಳ ಪ್ರೀತಿಯಿಂದ ಹಿಂದಕ್ಕೆ ಕರೆದು, "ಇನ್ನೂ ಹೆಚ್ಚಿಗೆ ತಗೋ ಮಗು, ಆದರೆ ದುರಾಸೆ ಪಡಬೇಡ" ಎಂದು ಹೇಳಿ, ಅವರು ಇನ್ನಷ್ಟು ಹೆಚ್ಚಿಗೆ ಹಣ್ಣುಗಳು ಹಾಗೂ ಸಿಹಿತಿಂಡಿಗಳನ್ನು ಕೊಟ್ಟರು.

ಆಗ ನಾನು "ಆದರೆ ಮಹಾಶಯರೇ, ಇದೂ ಕೂಡ ಸಾಕಾಗುವುದಿಲ್ಲ. ನಾವೆಲ್ಲ ತುಂಬ ಹಸಿದಿದ್ದೇವೆ. ನಿಮ್ಮ ಬಳಿ ತುಂಬ ತಿಂಡಿ ಇದೆ. ಆದರೆ ನೀವು ಉದ್ದಿಶ್ಯಪೂರ್ವಕವಾಗಿ ನನಗೆ ಸಾಕಷ್ಟು ಕೊಡುತ್ತಿಲ್ಲ" ಎಂದೆ.

ಇದನ್ನು ಕೇಳಿ ಶ್ರೀರಾಮಕೃಷ್ಣರು ನಗುತ್ತ, "ಒಳ್ಳೆಯದು. ಅವರಿಗೆಲ್ಲ ನಾನು ಏಕೆ ಕೊಡಬೇಕು? ಅವರೆಲ್ಲ ಇಲ್ಲಿಗೇ ಬರಲು ಸಾಧ್ಯವಿಲ್ಲವೇ? ಅವರ ಪರವಾಗಿ ಬಂದು ಕೇಳಲು ನಿನಗೆ ಹೇಳಿದವರ್ಯಾರು?" ಎಂದು ಕೇಳಿದರು.

ಆಗ ನಾನು "ಮಹಾಶಯರೇ, ನಿಮಗೆ ನಂಬಿಕೆಯಿಲ್ಲದಿದ್ದಲ್ಲಿ,

ದಯವಿಟ್ಟು ನಮ್ಮ ದೋಣಿಯ ಹತ್ತಿರ ಬಂದು ನೋಡಿ, ಅಲ್ಲಿ ಒಂದು ಡಜನ್ ಮಂದಿ ಇರುವರೋ, ಇಲ್ಲವೋ ಎಂದು. ನಮಗೆ ತುಂಬ ಹಸಿವಾಗದಿದ್ದರೆ, ನಾವೇಕೆ ನಿಮ್ಮ ಬಳಿ ಬರಬೇಕಿತ್ತು?" ಎಂದು ಹೇಳಿದೆ.

ಆಗ ಶ್ರೀರಾಮಕೃಷ್ಣರು ಒಬ್ಬ ವ್ಯಕ್ತಿಯನ್ನು ಕರೆದು, ಒಂದು ಬುಟ್ಟಿ ತುಂಬ ಹಣ್ಣು ಹಾಗೂ ಸಿಹಿ ತಿಂಡಿಗಳನ್ನು ನನಗೆ ನೀಡುವಂತೆ ಹೇಳಿದರು. ನಾನು ಅವನ್ನೆಲ್ಲ ತೆಗೆದುಕೊಂಡು ನನ್ನ ಸ್ನೇಹಿತರ ಬಳಿ ಹೋಗಿ ಹೇಳಿದೆ, "ನೋಡಿ, ನೀವು ನನ್ನ ಜೊತೆ ಬರಲಿಲ್ಲ, ಆದರೆ ನಾನು ನಿಮಗಾಗಿ ಈ ತಿಂಡಿಗಳನ್ನೆಲ್ಲ ತಂದಿರುವೆನು" ಎಂದು. ಇದು ಶ್ರೀರಾಮಕೃಷ್ಣರೊಡನೆ ನನ್ನ ಪ್ರಥಮ ಭೇಟಿ.

ನಂತರದ ದಿನಗಳಲ್ಲಿ ನಾನು ಆಗೊಮ್ಮೆ ಈಗೊಮ್ಮೆ ಎಂಬಂತೆ ದಕ್ಷಿಣೇಶ್ವರಕ್ಕೆ ಭೇಟಿ ನೀಡುತ್ತಿದ್ದೆ. ಶ್ರೀರಾಮಕೃಷ್ಣರ ನೋಟವೇ ನನ್ನನ್ನು ಸೆರೆಹಿಡಿದುಬಿಟ್ಟಿತ್ತು. ಶ್ರೀರಾಮಕೃಷ್ಣರು ಯಾವಾಗಲೂ ಕೇಶವ ಚಂದ್ರಸೇನ, ವಿಜಯಕೃಷ್ಣ ಗೋಸ್ವಾಮಿ ಮತ್ತು ಇನ್ನೂ ಮುಂತಾದ ಜನಪ್ರಿಯ ಪಂಡಿತೋತ್ತಮರಿಂದ ಸುತ್ತುವರಿಯಲ್ಪಟ್ಟಿರುವುದನ್ನು ನಾನು ನೋಡುತ್ತಿದ್ದೆ. ಆದ್ದರಿಂದ ಶ್ರೀರಾಮಕೃಷ್ಣರ ಬಳಿ ಮಾತನಾಡುವ ಧೈರ್ಯವನ್ನು ನಾನು ಮಾಡುತ್ತಿರಲಿಲ್ಲ. ಅವರು ಯಾವಾಗಲೇ ಆಗಲಿ, ನನ್ನನ್ನು ನೋಡಿದ ತಕ್ಷಣ, ತಮ್ಮ ಸಹಾಯಕನಿಗೆ ಹೇಳುತ್ತಿದ್ದರು: "ಆ ಹುಡುಗನಿಗೆ ಸ್ವಲ್ಪ ಒಳ್ಳೆಯ ತಿಂಡಿಯನ್ನು ಕೊಡು. ಅವನು ತುಂಬ ಹಸಿದಿದ್ದಾನೆ" ಎಂದು. ಆಗ ನನಗೆ ತುಂಬ ನಾಚಿಕೆ ಆಗುತ್ತಿತ್ತು.

ನನ್ನ ಮದುವೆಯಾದ ನಂತರ, ಅಲ್ಲಿ ಇಲ್ಲಿ ಕೆಲಸ ಹುಡುಕಲೆಂದು ಹೋಗಬೇಕಾಗಿದ್ದರಿಂದ ಶ್ರೀರಾಮಕೃಷ್ಣರನ್ನು ಭೇಟಿಯಾಗಲಾಗಲಿಲ್ಲ. ಕೊನೆಗೆ "ರ್‍ಯಾಲಿ ಸಹೋದರರ ಕಂಪೆನಿ"ಯಲ್ಲಿ ನನಗೆ ಒಂದು ಉದ್ಯೋಗ ದೊರಕಿತು. ಆದರೆ ಸಂಬಳ ಕಡಿಮೆಯಾದ್ದರಿಂದ, ಕಛೇರಿಗೆ ಗಾಡಿಯಲ್ಲಿ ಹೋಗಿ ಬರಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಪ್ರತಿದಿನ ನಾನು ಕಛೇರಿಗೆ ನಮ್ಮ ಮನೆ ಇರುವ ಬಿಡಾನ್ ರಸ್ತೆಯಿಂದ ಗೆರತಲಾ ಮೂಲಕ, ಕಛೇರಿಯಿದ್ದ ಧರ್ಮತಲಾಗೆ ನಡೆದುಕೊಂಡು ಹೋಗಿ ಬರಬೇಕಾಗಿತ್ತು.

ಒಂದು ದಿನ ಸಂಜೆ ನಾನು ಗೆರತಲಾದ ಮಸೀದಿಯ ಬದಿಯಿಂದ ಹೋಗುತ್ತಿದ್ದೆ. ಆಗ ಮಸೀದಿಯಿಂದ ಒಬ್ಬ ಮುಸ್ಲಿಂ ಸಾಧುವು ಗಟ್ಟಿಯಾಗಿ ಪ್ರಾರ್ಥಿಸುತ್ತಿದ್ದುದು ಕೇಳಿಸಿತು: "ಓ ನನ್ನ ಪ್ರಿಯತಮ, ದಯವಿಟ್ಟು ಬಾ! ದಯವಿಟ್ಟು ಬಾ, ಓ ನನ್ನ ಪ್ರಿಯತಮ!" ಎಂದು. ಅವನು ಈ ಪ್ರಾರ್ಥನೆಯನ್ನು ಬಹಳ ಪ್ರೇಮ ಮತ್ತು ವ್ಯಾಕುಲತೆಗಳಿಂದ ಮತ್ತೆ ಮತ್ತೆ ಮಾಡುತ್ತಿದ್ದ, ಪ್ರೇಮದ ಕಣ್ಣೀರು ಅವನ ಕೆನ್ನೆಗಳ ಮೇಲೆ ಉರುಳುತ್ತಿದ್ದವು.

ಆಗ ತಕ್ಷಣ ಅಲ್ಲಿ ಶ್ರೀರಾಮಕೃಷ್ಣರು ಬಾಡಿಗೆಯ ಗಾಡಿಯಿಂದ ಇಳಿದು, ಆ ಮುಸ್ಲಿಂ ಸಾಧುವಿನ ಕಡೆ ಹೊರಟಿದ್ದನ್ನು ಕಂಡೆ. ಅವರಿಬ್ಬರೂ ಒಬ್ಬರೊನ್ನೊಬ್ಬರು ಅಪ್ಪಿಕೊಂಡರು. ಈ ಘಟನೆಯು ಶ್ರೀರಾಮಕೃಷ್ಣರು ಕಾಳೀಘಾಟ್‌ಗೆ ಭೇಟಿಕೊಟ್ಟು, ಜಗನ್ಮಾತೆಯ ದರ್ಶನ ಪಡೆದು ಹಿಂದಿರುಗಿ ಬರುವಾಗ ನಡೆದದ್ದು. ಅದು ಎಂತಹ ಅದ್ಭುತವಾದಂತಹ ದೃಶ್ಯ! ಇನ್ನಿಬ್ಬರು ಗಾಡಿಯಲ್ಲೇ ಇದ್ದರು. ಅವರಲ್ಲಿ ಒಬ್ಬ ರಾಮಲಾಲ್, ಶ್ರೀರಾಮಕೃಷ್ಣರ ಅಣ್ಣನ ಮಗ. ನಾನು ದಕ್ಷಿಣೇಶ್ವರಕ್ಕೆ ಹೋದಾಗಲೆಲ್ಲ ಶ್ರೀರಾಮಕೃಷ್ಣರು ಆತನಿಗೆ ಹೇಳಿ ನನಗೆ ಪ್ರಸಾದ ಕೊಡಿಸುತ್ತಿದ್ದರು.

ಶ್ರೀರಾಮಕೃಷ್ಣರ ಚಿತ್ರ ನನ್ನ ನೆನಪಿನಲ್ಲಿ ಇನ್ನೂ ಜೀವಂತವಾಗಿದೆ. ಆ ಸಮಯದಲ್ಲಿ ಕೇವಲ ಕೆಲವೇ ಮಂದಿ ಶ್ರೀರಾಮಕೃಷ್ಣರನ್ನು ಅರಿತಿದ್ದರು, ಮತ್ತು ಅವರನ್ನು ಅರಿತುಕೊಳ್ಳಲು ಪ್ರಯತ್ನಿಸಿದವರು ತಾನೇ ಎಷ್ಟು ಜನ? ನಾನು ಆ ಕರುಣಾಮಯ ಪ್ರಭುವನ್ನು ನೋಡಿದೆನಾದರೂ, ಅವರನ್ನು ನನ್ನಿಂದ ಅರ್ಥಮಾಡಿ ಕೊಳ್ಳಲಾಗಲಿಲ್ಲವಲ್ಲ ಎಂದು ಈಗ ನನ್ನ ಈ ಇಳಿ ವಯಸ್ಸಿನಲ್ಲಿ ವಿಷಾದ ಪಡುತ್ತಿದ್ದೇನೆ. ಎಲ್ಲಕ್ಕೂ ಕಾಲ ಕೂಡಿಬರಬೇಕಲ್ಲವೆ? ನನ್ನ ಯೌವನದ ಆಕರ್ಷಣೆಗಳಿಂದಾಗಿ ನಾನು ನನ್ನ ಬದುಕಿನಲ್ಲಿ ಒಂದು ಅತ್ಯಮೂಲ್ಯ ವಸ್ತುವನ್ನು ಕಳೆದುಕೊಂಡೆನಲ್ಲ ಎಂದು ಈಗ ಗೋಳಾಡುತ್ತಿದ್ದೇನೆ.

ಶ್ರೀ ರಾಮಕೃಷ್ಣರ ಬಳಿಗೆ ಬಡ ಹುಡುಗನೊಬ್ಬ ಪ್ರತಿದಿನ ಬರುತ್ತಿದ್ದ. ಆತನು ತಂದ ಯಾವುದೇ ತಿಂಡಿಯನ್ನು ಅವರು ಒಮ್ಮೆಯೂ ಮುಟ್ಟುತ್ತಿರಲಿಲ್ಲ. ಯಾಕೆಂದು ಯಾರಿಗೂ ತಿಳಿಯದು. ಕೊನೆಗೊಂದು ದಿನ ರಾಮಕೃಷ್ಣರೇ, "ಪಾಪ! ಈ ಹುಡುಗನಿಗೆ ಶ್ರೀಮಂತನಾಗಬೇಕೆಂದು ಹೆಬ್ಬಯಕೆ. ಆತನು ತಂದ ತಿಂಡಿಯನ್ನು ಕಿಂಚಿತ್ತು ರುಚಿ ನೋಡೋಣ" ಎಂದು ಹೇಳಿ ಸ್ವಲ್ಪವೇ ಸ್ವಲ್ಪವನ್ನು ತಿಂದರು. ತಕ್ಷಣವೇ ಆ ಹುಡುಗನ ಆರ್ಥಿಕ ಸ್ಥಿತಿ ಬದಲಾಗತೊಡಗಿತು ಮತ್ತು ಮುಂದೆ ಆತ ಒಬ್ಬ ಕಲ್ಕತ್ತೆಯ ಹೆಸರಾಂತ ಶ್ರೀಮಂತನಾದ !

ಮತ್ತೊಬ್ಬ ಹುಡುಗ—ಆಧ್ಯಾತ್ಮಿಕ ಪಿಪಾಸು, ದಿನವೂ ಶ್ರೀರಾಮಕೃಷ್ಣರ ದರ್ಶನಕ್ಕಾಗಿ ಬರುತ್ತಿದ್ದ. ಒಂದು ದಿನ ಅವನನ್ನು ಮಂದಿರಕ್ಕೆ ಕರೆದುಕೊಂಡು ಹೋಗಿ, ಆತನ ಎದೆಯನ್ನು ಮುಟ್ಟಿ, ತಾಯಿಯ ದರ್ಶನವನ್ನು ಕರುಣಿಸಿದರು. ನಂತರ ಹೇಳುತ್ತಿದ್ದರು, "ಈ ಹುಡುಗನಿಗೆ ಈ ಜನ್ಮದಲ್ಲಿ ಭಗವಂತನ ಸಾಕ್ಷಾತ್ಕಾರವಾಗುವುದಿಲ್ಲ. ಆದರೆ ಮುಂದಿನ ಜನ್ಮದಲ್ಲಿ ಏನು ದೊರೆಯುವುದೆಂಬುದನ್ನು ಈಗಲೇ ತೋರಿಸಿದೆ. ಏಕೆಂದರೆ ಇದರಿಂದ ಆ ಹುಡುಗನಿಗೆ ಈ ಜನ್ಮದಲ್ಲಿ ಆಧ್ಯಾತ್ಮಿಕ ಹೋರಾಟ ನಡೆಸಲು ಸ್ಫೂರ್ತಿ ದೊರೆಯುತ್ತದೆ" ಎಂದು.